

ಮಧ್ಯಾಹ್ನ 3 ಗಂಟೆಗೇ ಶಾಲೆಯಿಂದ ಮನೆಗೆ ಬರಬೇಕಾಗಿದ್ದ ಮಗು 5 ಗಂಟೆ ಆದರೂ ಇನ್ನೂ ಬಂದಿಲ್ಲ! ಕತ್ತಲಾಗುವವರೆಗೂ ಅಂಗಳದಲ್ಲೇ ಆಡುತ್ತಿದ್ದ ಮಗು ಇನ್ನೇನು ಒಳಗೆ ಕರೆಯಬೇಕೆಂದರೆ ಕಾಣುತ್ತಿಲ್ಲ! ಕೆಲಸ ಮಾಡಿ ದುಡಿದು ಹಣ ಮನೆಗೆ ಕಳಿಸುತ್ತೇನೆ ಎಂದು ನಗರಕ್ಕೆ ಹೋದ ಮಗಳು ತಿಂಗಳಾದರೂ ತಿರುಗಿ ಬಂದಿಲ್ಲ. ಫೋನ್ ಮಾಡಿದರೂ ಉತ್ತರವಿಲ್ಲ! ಇಂತಹ ಸಂದರ್ಭಗಳಲ್ಲಿ 'ಮುಂದೇನು?' ಎನ್ನುವ ಪ್ರಶ್ನೆ ಎಲ್ಲರೆದುರು ಧುತ್ತೆಂದು ಬಂದು ನಿಲ್ಲುತ್ತದೆ. ಅಂತಹ ತಂದೆ ತಾಯಿಯರ ನೋವಿಗೆ, ಸಂಕಟಕ್ಕೆ ಬೇಗುದಿಗೆ ಅದ್ಯಾವ ಶಬ್ದಗಳಲ್ಲಿ ಸಾಂತ್ವನ ಹೇಳಲು ಸಾಧ್ಯ? ಅವರೆಲ್ಲಿ ಹೋಗಿದ್ದಾರೆಂದು ಗೊತ್ತಾಗದಂತೆ ಮಕ್ಕಳನ್ನು ಕಳೆದುಕೊಳ್ಳುವ ಆ ನೋವಿಗೆ ಶ್ರೀಮಂತ ಅಥವಾ ಬಡ ತಂದೆ ತಾಯಿ ಎಂಬ ಭೇದವೂ ಇರುವುದಿಲ್ಲ. ಅದ್ಯಾವ ಕಾರಣಕ್ಕೆ ಮಗು ಕಾಣೆಯಾಯಿತು? ಎಂತಹ ಕ್ರೌರ್ಯಕ್ಕೆ ಅದು ಬಲಿಯಾಗಿದೆ? ನಿಜಕ್ಕೂ ಅದು ಬದುಕಿದೆಯಾ? ಇದ್ದರೆ ಎಂತಹ ಪರಿಸ್ಥಿತಿಯಲ್ಲಿದೆ? ಮನೆಯಲ್ಲಿ ಕೈತುತ್ತು ನೀಡಿದರೆ ತಿನ್ನಲೂ ಹಟ ಮಾಡುತ್ತಿದ್ದ ಮಗು ಈಗ ಹಸಿವೆಗೆ ಏನು ಮಾಡುತ್ತಿದೆ? ಅದ್ಹೇಗೆ ತಾವಿಲ್ಲದೆ ಬದುಕುತ್ತಿದೆ?– ಇಂಥದೇ ನೂರಾರು ಪ್ರಶ್ನೆಗಳು ದಿನವೂ ಮನಸ್ಸನ್ನು ಕೊರೆದು ಘಾಸಿ ಮಾಡುತ್ತಾ ಕ್ಷಣ ಕ್ಷಣವೂ ಸಾಯುವ ತಂದೆ–ತಾಯಿಯರ ಗೋಳು, ಆಕ್ರಂದನ ಅನಂತವಾದದ್ದು.

ರಾಷ್ಟ್ರೀಯ ಅಪರಾಧ ದಾಖಲೆ ವಿಭಾಗ (**National Crime Records Beureau**)ದಲ್ಲಿ ದೊರಕುವ ಅಂಕಿ– ಅಂಶಗಳನ್ನು ನೋಡಿದರೆ ಗಾಬರಿಯಾಗುತ್ತದೆ. ಭಾರತದಲ್ಲಿ, 2015ರಲ್ಲಿ ದಿನವೊಂದಕ್ಕೆ ಸರಾಸರಿ 130 ಮಕ್ಕಳು ಕಾಣೆಯಾಗಿದ್ದಾರೆ. 2015ರಲ್ಲಿ ಕೇವಲ ಏಪ್ರಿಲ್ ತಿಂಗಳವರೆಗೆ ದಾಖಲಾದ ಅಂಕಿ– ಅಂಶಗಳ ಪ್ರಕಾರ ಒಟ್ಟು 15,988 ಮಕ್ಕಳು ಮನೆಬಿಟ್ಟು ಕಣ್ಮರೆಯಾಗಿದ್ದು ಅದರಲ್ಲಿ 6,921 ಮಕ್ಕಳು ಇನ್ನೂ ಪತ್ತೆ ಆಗಿಲ್ಲ!

ಅಷ್ಟಕ್ಕೂ ಮಕ್ಕಳು ಏಕೆ ಮನೆ ಬಿಟ್ಟು ಹೋಗುತ್ತಾರೆ?

ಸುಮಾರು 1.25 ಕೋಟಿಯಷ್ಟು ಜನಸಂಖ್ಯೆಯನ್ನು ಹೊಂದಿದ, ನೂರಾರು ಭಾಷೆ–ಸಂಸ್ಕೃತಿಗಳನ್ನು ಹೊಂದಿರುವ ನಮ್ಮ ಸಂಕೀರ್ಣ ದೇಶದಲ್ಲಿ ದೊಡ್ಡ ದೊಡ್ಡ ಧ್ವನಿಗಳೇ ಉಡುಗಿ ಹೋಗಿರುವಾಗ, ಇನ್ನೂ ಮಾತುಬಾರದ, ಈಗಷ್ಟೇ ಹೆಜ್ಜೆ ಇಡಲು ಕಲಿತ ಈ ಮುಗ್ಧ ಮಕ್ಕಳ ಕಣ್ಮರೆ ಪ್ರಕರಣಗಳನ್ನು ಭೇದಿಸುವುದು ಹೇಗೆ?

ಕಾಣೆಯಾಗುವ ಮಕ್ಕಳ ಸಮಸ್ಯೆ ನಾವೆಲ್ಲ ಅಂದುಕೊಂಡದ್ದಕ್ಕಿಂತ ಬಹಳ ಗಂಭೀರವಾದದ್ದು ಹಾಗೂ ಬೃಹತ್ತಾದದ್ದು. ಅಂಕಿ ಅಂಶಗಳ ಪ್ರಕಾರ,